ರಿಟ್ ಅರ್ಜಿ ಸಂಖ್ಯೆ ೩೯೫೬/೮೦ ರಂತೆ ನ್ಯಾಯಾಲಯ ಕೂಡ ನಿರ್ದೇಶಿಸಿದ್ದರೂ ಸೇವಾ ಹಿರಿತನ ನಿರ್ಧರಿಸಲು ಮೈಸೂರು ವಿಭಾಗಾಧಿಕಾರಿಗಳಿಂ ಹಾಗೂ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಯಾವುದೇ ಕ್ರಮವನ್ನು ಇಲ್ಲಿಯವರೆಗೆ ಕ್ರಮ ಕೈ ಗೊಳ್ಳದೇ ಇರಲು ಕಾರಣಗಳೇನು ?

೫) ದಿನಾಂಕ ೨೮-೭-೭೬ರಂದು ಸರ್ವೆಡೆಗೊಳ್ಳುವಾಗ ತಾಲ್ಲೂಕು ಅಭಿವೃದ್ಧಿ ಮಂಡಳಿಗಳಲ್ಲಿದ್ದ ಹುದ್ದೆಗಳ ತತ್ಸಮಾನ ಕಂದಾಯ ಇಲಾಖೆ ಹುದ್ದೆಗಳಲ್ಲಿ ಸಮೀಕರಣಗೊಳಿಸಿ ಸೇವಾ ಹಿರಿತನ, ಬಡ್ತಿ, ಇತ್ಯಾದಿ ಎಲ್ಲಿ ನಿರ್ಧರಿತವಾಗಿಲ್ಲವೋ ಅಲ್ಲಿ ಎಂದು ನಿರ್ಧರಿಸಲ್ಪಡುತ್ತದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಮೈಸೂರು ಮತ್ತು ಬೆಳಗಾಂ ವಿಭಾಗದಲ್ಲಿ ವಿಲನೀಕರಣಗೊಳಿಸಿದ ಅಧಿಕಾರಿಗಳ ಮತ್ತು ನೌಕರರ ಸೇವಾ ಹಿರಿತನ ನಿರ್ಧರಿಸುವ ಬಗ್ಗೆ ಕೆಲವು ಆಡಳಿತಾತ್ಮಕ ಸಮಸ್ಯೆಗಳ ಬಗ್ಗೆ ಸ್ಪಷ್ಟೀಕರಣ ಕೇಳಿದ್ದಕ್ಕೆ ಈಗಾಗಲೇ ಸ್ಪಷ್ಟೀಕರಣ ನೀಡಲಾಗಿದೆ. ಇದರ ಮೇಲೆ ಈಗ ಜೇಷ್ಠತಾ ಪಟ್ಟಿಯನ್ನು ತಯಾರು ಮಾಡಲಾಗುತ್ತಿದೆ.

ಆ) 'ಅ' ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಬಗ್ಗೆ ಈಗಾಗಲೇ ಸ್ಪಷ್ಟ ನಿರ್ದೇಶನವನ್ನು ಸಂಬಂಧಿಸಿದವರಿಗೆಲ್ಲಾ ನೀಡಲಾಗಿದ್ದು ಅತಿ ಶೀಘ್ರದಲ್ಲಿಯೇ ನಿರ್ಧರಿಸಲಾಗುವುದು.

ರಾಜ್ಯದಲ್ಲಿ ಸರಕಾರಿ ಜಮೀನನ್ನು ಒತ್ತುವರಿ ಮಾಡಿದ ಕಾಫಿ ಬೆಳೆಯ ವಿವರಗಳು

೧೪೭೩. ಶ್ರೀ ಕೆ. ಎಚ್. ಪಾಟೀಲ್ (ಗದಗ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸರಕಾರಿ ಜಮೀನನ್ನು ಒತ್ತುವರಿ ಮಾಡಿದ ಕಾಫಿ ಪ್ಲಾಂಟರುಗಳ ಒಟ್ಟು ಸಂಖ್ಯೆ ಎಷ್ಟು ಹಾಗೂ ಜಮೀನುಗಳ ವಿವರಗಳೇನು ?

ಆ) ಒತ್ತುವರಿ ಮಾಡಿರುವ ಜಮೀನಿನಲ್ಲಿ ಕನಿಷ್ಠ ಹಾಗೂ ಗರಿಷ್ಠ ಕ್ಷೇತ್ರಗಳೆಷ್ಟು,

ಇ) ಈ ಒತ್ತುವರಿ ಮಾಡಿದವರ ಮೇಲೆ ಏನು ಕ್ರಮ ಕೈಕೊಳ್ಳಲಾಗಿದೆ.

ಈ) ಕೈಕೊಳ್ಳಲಾಗಿರುವ ಕ್ರಮಗಳ ವಿವರಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ರಾಜ್ಯದಲ್ಲಿ ಸರಕಾರಿ ಜಮೀನನ್ನು ಒತ್ತುವರಿ ಮಾಡಿದ ಕಾಫಿ ಪ್ಲಾಂಟರುಗಳ ಒಟ್ಟು ಸಂಖ್ಯೆ ೬೩೫ ಹಾಗೂ ಅವರುಗಳು ಒತ್ತುವರಿ ಮಾಡಿದ ಜಮೀನುಗಳು ೨೧, ೪೬೬-೧೨ ಎಕರೆಗಳು

ಆ) ಒತ್ತುವರಿ ಮಾಡಿರುವ ಜಮೀನಿನಲ್ಲಿ ಕನಿಷ್ಠ ಕ್ಷೇತ್ರ ೦-೦೪ ಗುಂಟೆ. ಗರಿಷ್ಠ ಕ್ಷೇತ್ರ ೧೬೩-೩೮ ಎಕರೆ

ಇ) ಒತ್ತುವರಿ ಮಾಡಿದವರಿಂದ ಕಾನೂನು ರೀತ್ಯಾ ಟಿ.ಟಿ. ಫೈನ್ ವಗೈರೆ ತೆರಿಗೆಗಳನ್ನು ವಸೂಲಿ ಮಾಡಿಕೊಂಡ ಕ್ರಮ ಜರುಗಿಸಲಾಗಿದೆ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಧರ್ಮದತ್ತಿ ದೇವಸ್ಥಾನಗಳು

೧೪೫೯. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಧರ್ಮದತ್ತಿ ಆಡಳಿತದ ದೇವಸ್ಥಾನಗಳ ಸಂಖ್ಯೆ ಎಷ್ಟು ?

ಆ) ಸದರಿ ದೇವಸ್ಥಾನಗಳಲ್ಲಿ ಧರ್ಮ ದತ್ತಿ ಕಾರ್ಯ ನಿರ್ವಾಹಕ ಸದಸ್ಯರನ್ನು ನೇಮಕ ಮಾಡಲಾಗಿದೆಯೆ ?